# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಸಚಿವಾಲಯದ ಶಾಖಾಧಿಕಾರಿಗಳು ಹಾಗೂ ತತ್ಸಮಾನ ಅಧಿಕಾರಿಗಳು
ಸರ್ಕಾರಿ ವೆಚ್ಚದಲ್ಲಿ ಒಂದು ಕನ್ನಡ ದಿನಪತ್ರಿಕೆಯನ್ನು ಪಡೆಯುವ ಬಗ್ಗೆ.

ಓದಲಾಗಿದೆಃ

1. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ 9 ಸಗ್ರನಿ 98 ದಿನಾಂಕಃ 17–02–1998.
2. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ 17 ಸಗ್ರನಿ 97 ದಿನಾಂಕಃ 27–6–1998.
3. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ 55 ಸಗ್ರಇ 98 ದಿನಾಂಕಃ 6–4–2000.
4. ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ 12 ಸಗ್ರನಿ 2002 ದಿನಾಂಕಃ 26–10–2002.
5. ದಿನಾಂಕಃ 28–6–03 ರಂದು ನಡೆದ ಸಚಿವಾಲಯ ಗ್ರಂಥಾಲಯ ಸಮಿತಿ ಸಭೆಯ ಠರಾವು ಸಂಖ್ಯೆ 5.

ಪ್ರಸ್ತಾವನೆಃ

ದಿನಾಂಕಃ 28–6–2003 ರಂದು ನಡೆದ ಸಚಿವಾಲಯ ಗ್ರಂಥಾಲಯದ ಸಮಿತಿ ಸಭೆಯಲ್ಲಿ ಸಮಿತಿಯು ಸಚಿವಾಲಯದ ಶಾಖಾಧಿಕಾರಿಗಳಿಗೆ ಹಾಗೂ ತತ್ಸಮಾನ ಅಧಿಕಾರಿಗಳಿಗೆ ಒಂದು ಕನ್ನಡ ದಿನಪತ್ರಿಕೆಯನ್ನು ಕಚೇರಿಯ ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ಪಡೆಯಲು ಅನುಮತಿ ನೀಡಲು ತೀರ್ಮಾನಿಸಿದೆ. ಈ ವಿಷಯದ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಿದಾಗ ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಈ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು 2003–04 ನೇ ಸಾಲಿನ ಆಯವ್ಯಯದ ಮಿತಿಯಲ್ಲಿಯೇ ಭರಿಸಬೇಕೆಂದು ಮತ್ತು ಸದರಿ ಪ್ರಸ್ತಾವನೆಯನ್ನು ಸದರಿ ವೃಂದಕ್ಕೆ ಸೀಮಿತಗೊಳಿಸತಕ್ಕದ್ದು ಮತ್ತು ಇದನ್ನು ಯಾವುದೇ ಕಾರಣಕ್ಕೂ ವಿಸ್ತರಿಸಕೂಡದೆಂಬ ಷರತ್ತುಗಳೊಂದಿಗೆ ತನ್ನ ಒಪ್ಪಿಗೆಯನ್ನು ನೀಡಿರುತ್ತದೆ. ಆದ್ದರಿಂದ ಸರ್ಕಾರ ಈ ಕೆಳಕಂಡಂತೆ ಆದೇಶಿಸುತ್ತದೆ.

## ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 12 ಸಗ್ರನಿ 2002 ಬೆಂಗಳೂರು, ದಿನಾಂಕಃ 2–8–2003

ಪ್ರಸ್ತಾವನೆಯಲ್ಲಿ ತಿಳಿಸಿದ ಕಾರಣಗಳಿಂದಾಗಿ ಸಚಿವಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಶಾಖಾಧಿಕಾರಿಗಳು ಹಾಗೂ ತತ್ಸಮಾನ ಅಧಿಕಾರಿಗಳು ಕಚೇರಿಯ ಉಪಯೋಗಕ್ಕಾಗಿ ಸರ್ಕಾರಿ ವೆಚ್ಚದಲ್ಲಿ ಒಂದು ಕನ್ನಡ ದಿನಪತ್ರಿಕೆಯನ್ನು ಪಡೆಯಲು ಅನುಮತಿ ನೀಡಲಾಗಿದೆ. ಈ ಕನ್ನಡ ದಿನಪತ್ರಿಕೆಗೆ ಸಂಬಂಧಿಸಿದ ಬಿಲ್‌ಗಳ ಮೇಲೆ ಅಗತ್ಯ ಧೃಢೀಕರಣ ಮಾಡಿ ಪ್ರತಿ ಮೂರು ತಿಂಗಳುಗಳಿಗೊಮ್ಮೆ ಸಿಆಸುಇ (ಲೆಕ್ಕಪತ್ರ) ವಿಭಾಗದಿಂದ ಹಣ ಮರುಪಾವತಿ ಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಸಚಿವಾಲಯ ಗ್ರಂಥಾಲಯಕ್ಕೆ ಹಂಚಿಕೆಯಾದ ಲೆಕ್ಕ ಶೀರ್ಷಿಕೆ "2052-00-090-0-01-051 ಸಾಮಾನ್ಯ ವೆಚ್ಚಗಳು" ರ ಅಡಿಯಲ್ಲಿ ಭರಿಸತಕ್ಕದ್ದು ಮತ್ತು ಪ್ರಸಕ್ತ ಸಾಲಿನಲ್ಲಿ ಇದಕ್ಕೆ ತಗಲುವ ವೆಚ್ಚವು 2003–04 ನೇ ಸಾಲಿನ ಆಯವ್ಯಯದ ಮಿತಿಯಲ್ಲಿಯೇ ಇರತಕ್ಕದ್ದು.

ಹಳೆಯ ದಿನಪತ್ರಿಕೆಗಳನ್ನು ಆಯಾ ಕಚೇರಿ ಹಂತದಲ್ಲಿಯೇ ವಿಲೇವಾರಿ ಮಾಡಿಕೊಳ್ಳಬಹುದಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆ.ಇ. 1263 ವೆಚ್ಚ-5: 2003 ದಿನಾಂಕಃ 31-7-2003 ರಲ್ಲಿ ನೀಡಿದ ಒಪ್ಪಿಗೆಯ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-
(ಡೇನಿಯಲ್ ಬರೆಟ್ಟೊ)
ಮುಖ್ಯ ಗ್ರಂಥಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಸಚಿವಾಲಯ ಗ್ರಂಥಾಲಯ.

ಗೆಃ

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು.
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಆಯುಕ್ತರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ಅಪರ/ಸಹ ಕಾರ್ಯದರ್ಶಿಗಳು.
5. ಸರ್ಕಾರದ ಅಧೀನ ಕಾರ್ಯದರ್ಶಿಯವರು, ಸಿಆಸುಇ (ಲೆಕ್ಕಪತ್ರ): ಆರ್ಥಿಕ ಇಲಾಖೆ (ವೆಚ್ಚ-5).
6. ಸಚಿವಾಲಯದ ಎಲ್ಲಾ ಶಾಖಾಧಿಕಾರಿಗಳು: ತತ್ಸಮಾನ ಅಧಿಕಾರಿಗಳು.
7. ಶಾಖಾಧಿಕಾರಿ, ಸಿಆಸುಇ (ಲೆಕ್ಕಪತ್ರ-II) ಶಾಖೆ.
8. ಉಪಗ್ರಂಥಾಧಿಕಾರಿ, ಸಚಿವಾಲಯ ಗ್ರಂಥಾಲಯ (ವಿಧಾನ ಸೌಧ) /ಬಹುಮಹಡಿ ಕಟ್ಟಡ ಶಾಖೆ.
9. ಹೆಚ್ಚುವರಿ ಪ್ರತಿಗಳು.